ಕುರುಚಲು ಕಾಡಿನೊಳಗೆ ಪಕ್ಷಿ ಗೂಡು ಕಟ್ಟಿತ್ತು. ಈ ಗೂಡು ಎಷ್ಟು ಚಿಕ್ಕದೆಂದರೆ ನೀವು ಹತ್ತಿರದಲ್ಲೇ ನಿಂತಿದ್ದರೂ ಸೂಕ್ಷ್ಮವಾಗಿ ಗಮನಿಸದಿದ್ದರೆ ಪಕ್ಕನೆ ಕಾಣುವುದಿಲ್ಲ. ಮರಿಗಳ ಚೀವ್ವ್ .. ಚೀವ್ವ್ ಶಬ್ದ ಕೇಳಿ ಪತ್ತೆ ಹಚ್ಚಬಹುದಷ್ಟೆ. ಸುತ್ತಲಿದ್ದ ಮುಳ್ಳು ಪೊದೆಗಳು ತೊಂದರೆ ಕೊಡುವಂತಿದ್ದವು. ಅವನ್ನೆಲ್ಲ ಕಷ್ಟಪಟ್ಟು ದಾಟಿ ಅಂತೂ ಹೋಗಿ ಜಾಗ ಹಿಡಿದವು. ಒಂದು ಮರ ಬಳ್ಳಿಯ ಕವಲಿನ ಜಾಗದಲ್ಲಿ ಗೂಡಿತ್ತು. ಶಬ್ದ ಮಾಡದೆ ನಿಂತು ಕಾದೆವು. ಕ್ಯಾಮೆರಾವನ್ನು ಟ್ರೈಪಾಡಿಗೆ ಜೋಡಿಸಿಕೊಂಡೆವು. ನಮ್ಮ ಇರವು ಅವುಗಳ ಅರಿವಿಗೆ ಬಾರದಿರುವ ರೀತಿ ಎಚ್ಚರಿಕೆ ವಹಿಸಿದೆವು.

ಮೊದಲು ತಾಯಿ ಹಕ್ಕಿ ಬಂದು ಆಹಾರ ತಿನಿಸಿತು. ಎರಡು ಮರಿಗಳು ಗೂಡಿನಿಂದಾಚೆಗೆ ಬಾಯಗಲಿಸಿ ವಿಲವಿಲ ಹಪಹಪಿಸುವುದು ಕಂಡಿತು. ಈ ಪಕ್ಷಿ ಮೂರು ಇಲ್ಲವೇ ನಾಲ್ಕು ಮೊಟ್ಟೆಗಳನ್ನಿಡುವುದು ವಾಡಿಕೆ. ಇವುಗಳಲ್ಲಿ ಕೆಲವು ಬಿದ್ದು ಹಾಳಾಗಿ, ಇಲ್ಲವೇ ಮರಿಗಳು ಅಕಾಲಿಕವಾಗಿ ಸತ್ತರೆ ಕೊನೆಗೆ ಒಂದೋ ಎರಡು ಮರಿಗಳು ಉಳಿಯಬಹುದು. ಪಕ್ಷಿ ಇನ್ನೂ ಚಿಕ್ಕ ಚಿಕ್ಕ ಆಹಾರದ ಸಾಮಗ್ರಿಗಳನ್ನು ಹೊತ್ತು ತರುತ್ತಿತ್ತು. ಅದರ ಪೋಷಣೆಯ ಬದ್ಧತೆ ನೋಡಿ ಆನಂದಿಸಿದೆವು. ಮರಿಗಳು ಕೊಂಚ ದೊಡ್ಡವಾಗಿ ಬೆಳೆದರೆ ಅವು ಪುಟಾಣಿ ಗೂಡಿನಿಂದ ಈಚೆಗೆ ಬಾಯಿ ಬಿಟ್ಟು ಬರುತ್ತವೆ. 'ಅಮ್ಮ.. ಅಪ್ಪ.. ಊಟ ಕೊಡಿ' ಎಂದು ಹಂಬಲಿಸುತ್ತ ಅಂಗಲಾಚುತ್ತವೆ. ಈ ಮುಗ್ಧ ಸೊಬಗನ್ನು ನೋಡಿ ಚಿತ್ರೀಕರಿಸುವ ಆಸೆ ಇತ್ತು. ಅದಕ್ಕಾಗಿ ಇನ್ನೂ ಐದಾರು ದಿನ ಕಳೆಯಬೇಕಿತ್ತು. 'ವಾರ ಬಿಟ್ಟು ಬರ್ತೀವಿ. ಈಗ ಬೇರೆ ಏನು ತೋರಿಸುತ್ತೀಯ ಚಂದ್ರು' ಎಂದೆ. ಅವನು ನಗುತ್ತಾ, 'ನೀವು ನನ್ನ ಜೊತೆ ಬನ್ನಿ ಸರ್' ಎಂದು ಮೋಟೆಬೆನ್ನೂರಿನ ಕಪ್ಪು ಹೊಲಗಳ ಕಡೆಗೆ ಎಳೆದೊಯ್ದ.

ರೈತರು ಮೆಕ್ಕೆಜೋಳ ಮತ್ತು ಶೇಂಗಾ ಬೀಜ ಬಿತ್ತಿದ್ದರು. ಬೀಜ ಆಗಷ್ಟೇ ಮೊಳಕೆ ಒಡೆಯುತ್ತಿದ್ದವು. ಅಲ್ಲಿನ ಹೊಲಗಳ ಬದುವಿನ ಮೇಲೆ ಅಪರೂಪದ ಬಣ್ಣದ ಕತ್ತಿನ ಓತಿಕ್ಯಾತ ತೋರಿಸುವುದು ಚಂದ್ರುವಿನ ಆಸೆಯಾಗಿತ್ತು. ಹಿತವಾಗಿ ಬೀಸುವ ಗಾಳಿ ಒಮ್ಮೊಮ್ಮೆ ಜೋರಾಗುತ್ತಿತ್ತು. ಒಂದೂವರೆ ಕಿಲೋಮೀಟರ್ ನಡೆದು ಬಂದೆವು. 'ಫ್ಯಾನ್ ಥ್ರೋಟೆಡ್ ಲಿಝಾರ್ಡ್' ಎಂಬ ವಿಶೇಷ ಗಂಡು ಓತಿಕ್ಯಾತ ಇಲ್ಲೇ ಎಲ್ಲೋ ಇದೆ. ಸ್ವಲ್ಪ ಹುಡುಕಬೇಕು. ನೀವಿಲ್ಲಿ ಕೂತಿರಿ. ನಾನು ಕರೆದಾಗ ಬನ್ನಿ' ಎಂದು ಹೇಳಿ ಅವನು ಮುಂದೆ ನಡೆದು ಹೋದ. ಅಲ್ಲೇ ಇದ್ದ ಕಪ್ಪುಕಾರೆಯ ಮುಳ್ಳಿನ ಮರದ ಕೆಳಗೆ ನಾನು ಕೂತೆ. ಶ್ರೀಕಾಂತ್ ಸುತ್ತಮುತ್ತಲಿನ ಬಂಡೆಗಳ ಸಂದುಗೊಂದುಗಳಲ್ಲಿ ಇಣುಕಿ ನೋಡುತ್ತಾ ಸರ್ವೇ ಕಾರ್ಯ ನಡೆಸುತ್ತಿದ್ದರು.

ನನ್ನ ಬಲಭಾಗದಲ್ಲಿ ಏನೋ ಶಬ್ದವಾದಂತಾಗಿ ತಿರುಗಿ ನೋಡಿದೆ. ಕಾರೆ ಮರದ ಪೊಟರೆಯಿಂದ ಒಂದು ಹಾವಿನ ಮರಿ ಹೊರಗೆ ಬರಲು ಹವಣಿಸುತ್ತಿತ್ತು. ಅದಕ್ಕೆ ನಾನು ಅಡ್ಡ ಕೂತಿರುವುದು ಅಡಚಣೆ ಎನಿಸಿ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತಿತ್ತು. ಸುಮ್ಮನೆ ಅದನ್ನೇ ನೋಡುತ್ತಾ ಕೂತೆ. ನನ್ನ ಕಡೆ ಬಂದರೆ ಒಂದು ಫೋಟೊ ತೆಗೆಯಬಹುದು ಎಂದು ಕಾಯುತ್ತಾ ಇದ್ದೆ. ಅಷ್ಟರಲ್ಲಿ ಚಂದ್ರು, 'ಸಾರ್ ಬೇಗ ಓಡಿ ಬನ್ನಿ' ಎಂದು ಕೂಗಿದ. ಎದ್ದೋ ಬಿದ್ದವೋ ಎಂದು ಕಪ್ಪು ಹೆಂಟೆಗಳ ಮೇಲೆ ಕುಡುಕರಂತೆ ಓಲಾಡುತ್ತಾ ಓಡತೊಡಗಿದೆವು. ನಮ್ಮ ಪುಣ್ಯಕ್ಕೆ ಓತಿಕ್ಯಾತ ಹೊಲದ ಬದುವಿನ ಮೇಲಿತ್ತು. ಸುಮ್ಮನೆ ಕೂತಾಗ ಅದು ತನ್ನ ಕುತ್ತಿಗೆಯ ರೆಕ್ಕೆಗಳನ್ನು ಹೊರ ತೆಗೆದು ಪ್ರದರ್ಶಿಸುವುದಿಲ್ಲ. ಮಿಂಚಿನಂತೆ ಓಡಿ ಹೋಗಿ ಮತ್ತೆಲ್ಲೋ ಕೂತು ಪಟಪಟನೆ ಕತ್ತಿನ ಕೆಳಗಿನ ಬಣ್ಣದ ಚರ್ಮವನ್ನು ಹಿಗ್ಗಿಸಿ ತನ್ನ ಸೌಂದರ್ಯ ಪ್ರಕಟಿಸುತ್ತಿತ್ತು. ಅದರ ಹಿಂದೆ ಎರಡು ಗಂಟೆ ಅಲೆದಾಡಿ ಸುಸ್ತಾದೆವು. ಮಣ್ಣಿನ ಮೇಲೆ ಅಂಗಾತ ಬಿದ್ದು ಉಸಿರು ಬಿಗಿ ಹಿಡಿದು ಅದರ ಚಿತ್ರ ತೆಗೆಯಬೇಕಿತ್ತು. ಬೆಳೆ ಹಾಳಾಗದಂತೆ ಎಚ್ಚರವನ್ನೂ ವಹಿಸಬೇಕಿತ್ತು. ಕ್ಯಾಮೆರಾ ಹೊತ್ತು ಅನೇಕ ಸಲ ಒರಟು ಮಣ್ಣಿನ ಮೇಲೆ ತೆವಳಿ ಹೋಗಬೇಕಿತ್ತು. ಮೊಣಕೈ ಚರ್ಮ ಜಖಂ ಆಗಿ ಕಿತ್ತು ಹೋಗಿದ್ದು ಆನಂತರವೇ ಗೊತ್ತಾಗಿದ್ದು. ಗಾಳಿಯ ಹೊಡೆತಕ್ಕೆ ಅದರ ತ್ರಿವರ್ಣದ ತೆರೆದ ಚರ್ಮದ ಚೀಲ ವಿಲವಿಲ ಒದ್ದಾಡುತ್ತಿದ್ದ ಕಾರಣ ಒಳ್ಳೆಯ ಪಟ ತೆಗೆಯಲು ಹೆಣಗಾಡಬೇಕಾಯಿತು.

ಉದ್ದಬಾಲದ ಹಕ್ಕಿಯ ಪಟಗಳಿಗೆ ವಾರ ಬಿಟ್ಟು ಬರುವುದೇ ಸೂಕ್ತವೆಂದು ನಿರ್ಧರಿಸಿ ಚಂದ್ರುಗೆ ಟಾಟಾ ಹೇಳಿ ಹೊರಟೆವು. ದಿನವೂ ಅವನಿಗೆ ಫೋನ್ ಮಾಡಿ ಮರಿಗಳ ಚಟುವಟಿಕೆ ವಿಚಾರಿಸುತ್ತಿದ್ದೆವು. ಆತ ಹತ್ತರಿಂದ ಹನ್ನೆರಡು ದಿನಕ್ಕೆ ಸರಿಯಾಗಿ ಅವು ತಮ್ಮ